# ಮಾತಾಪಿತರ ಮಹಾಲಯದಲ್ಲಿ....

ನಾರಾಯಣಿ ದಾಮೋದರ್

ನಮಗೆ ಜನ್ಮವಿತ್ತು, ವಿದ್ಯಾಬುದ್ಧಿಯ ಬೆಳವಣಿಗೆಗೆ ಕಾರಣರಾದ, ಪರಂಪರೆಯ ಜ್ಞಾನವನ್ನು ನೀಡಿದ ಹೆತ್ತವರ ವಿಷಯವಾಗಿ ಇತ್ತೀಚೆಗೆ ಆಧುನಿಕ ಸಮಾಜದಲ್ಲಿ ಅಶ್ರದ್ಧೆ ಕಂಡುಬರುತ್ತಿದೆ. ನಮ್ಮ ಸಂಸ್ಕೃತಿಯ ಮಹೋಚ್ಚ ಪ್ರತಿನಿಧಿಗಳಿಬ್ಬರ ಜೀವನದ ಮೂಲಕ, ತಾಯಿತಂದೆಯರಿಗೆ ನಮ್ಮ ಸಂಸ್ಕೃತಿ ತೋರಿಸುವ ಸ್ಥಾನವೆಂತಹದು ಎಂಬುದನ್ನು ವಿವರಿಸಿರುವ ಲೇಖಕಿ, ಮಂಗಳೂರು ಆಕಾಶವಾಣಿಯಲ್ಲಿ ಸೇವೆಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಸಂಗೀತ, ಹರಿಕಥೆ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿರುವ ಅವರು ಎರಡು ಪೌರಾಣಿಕ ಕಥಾಸಂಕಲನಗಳನ್ನು ರಚಿಸಿ ಪ್ರಕಟಿಸಿದ್ದಾರೆ.



ಒಡಲ ಭಾವ – ಮಡಿಲ ಭಾವಗಳು ಎಲ್ಲ ಜೀವಿಗಳಲ್ಲಿಯೂ ಸಮಾನವಾಗಿದ್ದು – ಸ್ವಂತ ಅನುಭವಕ್ಕೆ ಮಾತ್ರ ದಕ್ಕುವ ವಿಶಿಷ್ಟ ಅನುಭೂತಿ. ಆದರೆ ಭಾರತೀಯರು – ಮಾತೆಗೆ ಮಿಗಿಲಾದ ದೇವರಿಲ್ಲ ಎನ್ನುವ ಸುಸಂಸ್ಕೃತ ಮಾತೃಭಾವ ಬಂದಿಗಳು. ಒಂದು ಜೀವನವು ತನ್ನ ಹರಿವಿನ ಯಾವುದೇ ಮುಖ್ಯ ಘಟ್ಟವನ್ನು ತಲುಪಿದಾಗ ತಮ್ಮ ಜನ್ಮದಾತರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಸತ್ಸಂಪ್ರದಾಯವೂ ಇದೆ. ಮಾತ್ರವಲ್ಲದೆ ಯಾವ ಆಧ್ಯಾತ್ಮಿಕ ಸಾಧಕರೂ ಮಾತೆಯ ಸೆಳೆತದಿಂದ ಮುಕ್ತವಾಗಿಲ್ಲ. ಅದ್ವೈತಾಚಾರ್ಯರಾದ ಶ್ರೀ ಶಂಕರಾಚಾರ್ಯರು, ಆಧುನಿಕ ದಾರ್ಶನಿಕ ಸಂತ ಶ್ರೀ ರಾಮಕೃಷ್ಣ ಪರಮಹಂಸರೂ ತಮ್ಮ ಮಾತಾಪಿತೃಭಾವದಲ್ಲಿ ಮಿಂದೆದ್ದವರೇ. ಕರುಳ ಭಾವವು ಜೀವ ಸಂಕುಲವನ್ನು – ಸದೇಹಿಯಾಗಿಯೂ ವಿದೇಹಿಯಾಗಿಯೂ, ಸಾಕಾರವಾಗಿಯೂ ನಿರಾಕಾರವಾಗಿಯೂ – ಆವರಿಸಿಕೊಂಡಿರುವ ನಂಟು.

ನಮ್ಮನ್ನು ಹೆತ್ತವರು – ನಮ್ಮ ಕಣ್ಣಿಗೆ ಕಾಣುವ ಸಂರಕ್ಷಕ ಶಕ್ತಿ. ಧ್ವನಿ, ಚಿತ್ರ, ಬರಹ ಮುಂತಾದ ಯಾವುದೇ ಪ್ರಕಟ ಮಾಧ್ಯಮದಲ್ಲಿಯೂ ಅಂತಃಕರಣವನ್ನು ಲೀಲಾಜಾಲವಾಗಿ ಮುಟ್ಟುವ ಅಭಿವ್ಯಕ್ತಿ – ಮಾತಾಪಿತೃಭಾವ. ಶ್ರುತಿಯಲ್ಲಿ – ಕಾಣಿಸದ ಪರಬ್ರಹ್ಮವನ್ನು ಗುರುತಿಸಲು ಅಸ್ಥೂಲಂ, ಅನಣು, ಅಹ್ರಸ್ವಂ, ಅದೀರ್ಘಂ, ಅಶಬ್ದಂ, ಅಸ್ಪರ್ಶಂ, ಅರೂಪಂ, ಅರಸಂ, ಅಗಂಧಂ ಎಂದು ವರ್ಣಿಸುತ್ತ – ಅದಲ್ಲ, ಇದಲ್ಲ ಎಂಬ ನೇತ್ಯಾತ್ಮಕ ಮಾರ್ಗದಲ್ಲಿ ಸೃಷ್ಟಿಕರ್ತೃ ಬ್ರಹ್ಮನ ಗುರುತು ಪತ್ರವನ್ನು ಕಟ್ಟಿಡುವ ಶಾಬ್ದಿಕ ಹೆಣಗಾಟ ನಡೆದಿದೆ. ಈ ವಿಶ್ವದಲ್ಲಿ ಉಚ್ಛಿಷ್ಟವಾಗದ ವಸ್ತುವೊಂದು ಇದ್ದರೆ – ಅದು – ಅನಿಶ್ಚಯದ ವೈಶ್ವಿಕ ಬ್ರಹ್ಮ; ಇನ್ನಿಲ್ಲದಷ್ಟು ಉಚ್ಛಿಷ್ಟವಾದ ವಸ್ತುವೊಂದಿದ್ದರೆ – ಅದು – ಬ್ರಹ್ಮರೂಪೀ ಸಾಕ್ಷಾತ್ ಮಾತಾಪಿತರು. ಅಣುವನ್ನು ಮಹತ್ತಾಗಿಸಬಲ್ಲ ಸೃಷ್ಟಿ ಸೇತುವೆಯ ಈ ಎರಡು ಕೊಂಡಿಗಳ ನಡುವೆ ಅಸಂಖ್ಯ ಬದುಕುಗಳು ಹೊರಳುತ್ತವೆ. ಒಂದೆಡೆ ಸಕಲ ಬ್ರಹ್ಮಾಂಡದ ಸೃಷ್ಟಿಕರ್ತ ಮತ್ತು ಇನ್ನೊಂದೆಡೆ ಸಾಂಸಾರಿಕ ಮಾತಾಪಿತರು. ಈ ಎರಡು ಧ್ರುವಗಳ ನಡುವೆ – ಭೂಮಿಯ ಸಮಸ್ತ ಭಾವ ಚಲನೆಯು ಬಂಧಿಸಲ್ಪಟ್ಟಿದೆ. ಕಂಡವರು ಹೇಳಲಾರರು; ಕಾಣದವರಿಗೆ ಗೊತ್ತಿಲ್ಲ ಎಂಬಂತಹ – ಮನೋ ಬುದ್ಧಿಗಳಿಗೆ ಅತೀತವಾದ ಪರಮಾತ್ಮವೆಂಬ ಬ್ರಹ್ಮವಸ್ತುವಿಗೆ – ಅಸ್ಥೂಲ, ಅನಣು... ಮುಂತಾದ ನಿರಾಕರಣೆಯ ಸೂತ್ರವು ಅನಿವಾರ್ಯ. ಆದರೆ ಈ ಭೂಮಿಯ ಭಾವ ವಲಯದಲ್ಲಿ ಸಹಜೀವಿಗಳಾಗಿರುವ ಜೀವಭಾವದ ಮಾತಾಪಿತರು ಸ್ಪರ್ಶ, ಶಬ್ದ, ರಸ, ಗಂಧ, ರೂಪಗಳಿಗೆ ಅಷ್ಟಿಷ್ಟು ದಕ್ಕುವಂಥವರು. ಆದ್ದರಿಂದಲೇ ಮಾತಾಪಿತರ ಭಾವಾ

ರ್ಣವವು ವರ್ಣನೆಗೆ ನಿಲುಕುವಂತಹುದು. ಮಾತಾಪಿತರನ್ನು ಸಾಕ್ಷಾತ್ ದೈವ ಎಂದೂ – ಮುಟ್ಟಿ ಅರ್ಥೈಸಲಾಗಿದೆ. ನಮ್ಮ ಜನ್ಮದಾತರ ಅನುಭವವು ಅವರ ಕಾಯವಳಿದ ಮೇಲೂ ಚಿತ್ತವೃತ್ತಿಯಿಂದ ಮಾಸುವುದಿಲ್ಲ.

ದೇಹಭಾವವನ್ನು ವಿಧೇಯವಾಗಿ ಅನುಸರಿಸುವ ದೇಹಧಾರೀ ಮಾತಾಪಿತರು – ಭೂಮಿಯ ಕರ್ಮನಿಷ್ಠ ಬದುಕಿಗೆ ಜೋತುಬಿದ್ದು ಸಾಂಸಾರಿಕ ನಿಯಮಗಳ ಚೌಕಟ್ಟಿಗೆ ಬದ್ಧರಾಗಿಯೇ ಸಂಸಾರದ ನೊಗಕ್ಕೆ ಹೆಗಲು ಕೊಡುತ್ತಾರೆ. ಸಂಸಾರದ ಎಲ್ಲ ದುಃಖಗಳಿಗೂ ಕಾರಣವಾದ ಮಮತೆಯನ್ನು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮುಗ್ಧವಾಗಿ ಅಪ್ಪಿಕೊಳ್ಳುತ್ತಾರೆ; ಬಹುತೇಕ ಬಾಹ್ಯ ವಸ್ತುಗಳನ್ನೇ ನೆಚ್ಚಿಕೊಂಡು, ಸಂಸಾರದ ಬಂಡಿಯನ್ನು ಏಕಮನಸ್ಸಿನಿಂದ ಎಳೆಯುತ್ತ, ಪೋಷಿಸುತ್ತ ಬದುಕನ್ನು ಹಿಂಡುತ್ತಾರೆ. ರೆಕ್ಕೆ ಬಲಿತೊಡನೆ ಹಾರಿಹೋಗುವ ಸಂತಾನ ಸದಸ್ಯರಿಂದ ತುಂಬಿರುವ ಈ ಸಂಸಾರದ ಗೂಡಿನಲ್ಲಿ ಜೊತೆಯಾಗಿದ್ದು – ಹೊಸ ಪಥಿಕರಿಗೆ ಧರ್ಮಾರ್ಥವಾಗಿ ಗುಟುಕು ನೀಡುವವರೇ ಈ ಮಮತಾಮಯಿಗಳು. ಮನೆ ಎಂದರೆ – ಬಂದು ಹೋಗುವ ಪಥಿಕರಿಗೆ ಧರ್ಮಾರ್ಥವಾಗಿ ನೀರು ಹಂಚುವ ಮತ್ತು ಸ್ವತಃ ದಣಿವಾರಿಸಿಕೊಳ್ಳುವ ಅರವಟ್ಟಿಗೆ. ಸಂಸಾರಕ್ಕೆ ಆಗಮಿಸುವ ಹೊಸ ಪಥಿಕರು ಕಿರು ಅವಧಿಯವರೆಗೆ ಹೆತ್ತವರ ಜೊತೆಗಿದ್ದರೂ ತಮ್ಮ ಬಾಯಾರಿಕೆಯು ತಣಿದ ಕೂಡಲೇ ಹಿಂದೆ ತಿರುಗಿ ನೋಡದೆ ಕೈಕೊಡವಿಕೊಂಡು ಮುನ್ನಡೆಯುವುದು ಈ ಸಂಸಾರದ ನೀತಿ ಎಂಬುದನ್ನು ತಿಳಿದೂ – ಮಮತೆಯ ಮೋಹಕ್ಕೆ ಕಟ್ಟುಬಿದ್ದು, ಬ್ರಹ್ಮಸೃಷ್ಟಿಯ ಪರಾವರ್ತಿತ ಕೊಂಡಿಯು ಮುರಿಯದಂತೆ ಸೃಷ್ಟಿಗೆ ನಿರಂತರವಾಗಿ ಮೋಹದ ಉಸಿರು ನೀಡುತ್ತಿರುವವರೇ ಮಾತಾಪಿತರು; ಮಾಯಾವಿಗಳು! ಇವರೇ ನಮ್ಮ ಕಣ್ಣಿಗೆ ಕಾಣುವ – ಪ್ರಜಾಪಿತರು.

ದ್ವೇಷವಾಗಲೀ ಮೋಹವಾಗಲೀ ಎರಡೂ ರಕ್ತಪಿಪಾಸುಗಳೇ. ಒಂದು ತಾಮಸ; ಇನ್ನೊಂದು ಸಾತ್ವಿಕ – ಅಷ್ಟೇ ವ್ಯತ್ಯಾಸ. ಆದ್ದರಿಂದ ಒಂದು ಆರಕ್ತ; ಇನ್ನೊಂದು ಅನುರಕ್ತ. ದ್ವೇಷದಷ್ಟೇ ಮಮತೆಯೂ ಪೀಡಿಸಬಲ್ಲದು; ಹೋಗುತ್ತ ಬರುತ್ತ ನಯವಾಗಿ ಕೊಯ್ಯಬಲ್ಲದು. ಒಂದು ಬಹಿರಂಗವಾದರೆ ಇನ್ನೊಂದು ಮುಸುಕಿನ ಗುದ್ದು ! ಹೀಗಿದ್ದೂ ಮಮತಾಭಾವ ಎಂಬುದು ಭೂಮಿಯನ್ನು ಆವರಿಸಿರುವ – ಮೀರಲಾಗದಂತಹ ಮಾಯೆ. ಮನುಷ್ಯರು ಮಾಡುವ ಎಲ್ಲ ಮಮತಾಮಯ ಕಾರ್ಯಗಳೂ ಕೊನೆಗೆ ದುಃಖದಲ್ಲಿಯೇ ಪರ್ಯವಸಾನವಾಗುತ್ತದೆ. ಇದನ್ನು ತಿಳಿದವರೂ ಸಂಸಾರಕ್ಕೆ ಒಡ್ಡಿಕೊಳ್ಳುತ್ತ ಸೃಷ್ಟಿಗೆ ವಿಧೇಯರಾಗಿರುವುದೇ ಈ ಸೃಷ್ಟಿ ರಹಸ್ಯದ ಜಿಡುಕು; ಒಗಟು. ಹಾಗೆಂದು ಸಂಸಾರ ಸುಖ ಎಂಬುದು ಸಾಪೇಕ್ಷ; ಅದನ್ನು ತ್ಯಜಿಸು ಎನ್ನಲಾಗದು. ಇಚ್ಛೆಸಿದರೂ – ಎಲ್ಲರಿಗೂ ತ್ಯಜಿಸಲಾಗದ ಪಾಶವಿದು. ಇದೂ ಸೃಷ್ಟಿಯ ನಿಯಮವೇ ಆಗಿದೆ.

ಜನಿಸಿದಾಗಲೇ ಆತ್ಮಜ್ಞಾನ ಸಿದ್ಧರಾಗಿದ್ದ ಶುಕ ಮಹರ್ಷಿಗಳು ಲೋಕವ್ಯಾಪಾರಕ್ಕೆ ವಿಮುಖರಾಗಿ, ಪರಿವ್ರಾಜಕರಾಗಿ ಹೊರಟಾಗ ಮಹಾಜ್ಞಾನಿಯಾಗಿದ್ದ ತಂದೆ ವೇದವ್ಯಾಸರು 'ಮಗೂ, ಮಗೂ' ಎಂದು ಕೂಗುತ್ತ ಅವರ ಹಿಂದೆ ಧಾವಿಸಿ ಹೋದರಂತೆ ! ಪುತ್ರಮೋಹ ! ಮಹರ್ಷಿಯಾಗಿದ್ದ ಮಹಾಜ್ಞಾನಿಗೂ ಪುತ್ರಮೋಹ! ಬ್ರಹ್ಮರ್ಷಿ ವಸಿಷ್ಠರು ಪುತ್ರನಾದ ಶಕ್ತಿಯ ಮರಣದಿಂದ ವಿಹ್ವಲರಾಗಿ ಆತ್ಮಹತ್ಯೆಗೂ ಎಳಸಿದ್ದರು ! ದೇಹಪ್ರಜ್ಞೆ ಮತ್ತು ಮೋಹಪ್ರಜ್ಞೆಯಿಂದ ಮುಕ್ತರಾಗುವುದು ಎಂತಹ ಜ್ಞಾನಿಗೂ ಸುಲಭದ ಮಾತಲ್ಲ. ಆದರೆ ತಾತ್ತ್ವಿಕ ನೆಲೆಯಲ್ಲಿ ಯೋಚಿಸಬಲ್ಲ ಜ್ಞಾನಿಗಳಾದವರು ಈ ಬದುಕು ತಮ್ಮ ಮುಂದೊಡ್ಡುವ ಯಾವುದೇ ಆಘಾತದಿಂದ ಕುಸಿಯದೆ, ಅದನ್ನು ಜೀರ್ಣಿಸಿಕೊಂಡು ನಿಭಾಯಿಸಬಲ್ಲರು. ಅಂತಹ ಜ್ಞಾನಿಗಳನ್ನು ಜ್ಞಾನವೇ ಆಧರಿಸುತ್ತದೆ. ಆದರೆ ಪೂರ್ವ ಸಂಸ್ಕಾರವಿಲ್ಲದ ಸಾಮಾನ್ಯರಿಗೆ ಮಾತ್ರ – ಬದುಕಿನ ಯಾವುದೇ ಆಘಾತಗಳಿಂದಲೂ ಹೊರಬರುವುದು ಕಠಿಣವಾಗಿ ಬಿಡುತ್ತದೆ. ಇಲ್ಲಿ ಯಾವುದೇ ಮೀಸಲಾತಿಯೂ ಉಪಯೋಗಕ್ಕೆ ಬರುವುದಿಲ್ಲ. ಪರಿಹಾರಧನವೂ ಉಪಕರಿಸುವುದಿಲ್ಲ. ಏಕಾಗ್ರ ತಪಸ್ಸಿನಿಂದ ವಿಮುಖವಾಗಿರುವ ಸಾಮಾನ್ಯ ಸಂಸಾರಸ್ಥರನ್ನು ಜ್ಞಾನದ ಹಾದಿಯು ಆಕರ್ಷಿಸುವುದೂ ಇಲ್ಲ ; ಜ್ಞಾನಕ್ಕೆ ಒಳಮಾರ್ಗಗಳೂ ಇಲ್ಲ ; ದುರ್ಗಮವಾದ ಹಾದಿಯಿದು. ಒಬ್ಬರ ಬೆನ್ನನ್ನು ಇನ್ನೊಬ್ಬರು ತುರಿಸುವಂತಹ ಹಾಸ್ಯ, ಚುಟುಕು, ಕುಟುಕುಗಳಂತಹ ಸಾಂಸಾರಿಕ ದೊಂಬರಾಟಗಳೆಲ್ಲವೂ ಜ್ಞಾನಶಾಖೆಗಳೆ? ಕಾಲಹರಣದ ತೇರನೆಳೆಯುವ ಯಾವುದೇ ಪುಡಿ ಉತ್ಸವಗಳಿಗೆ ಸಿದ್ಧ ಜ್ಞಾನವು ಒಲಿಯುವುದಿಲ್ಲ. ಆದ್ದರಿಂದಲೇ ಶುಕ ಮಹರ್ಷಿಗಳಂತಹ – ಶುದ್ಧ ಜ್ಞಾನನಿಧಿಗಳನ್ನು ತುರಿಕೆಯ ಸಂಸಾರವು ಆಕರ್ಷಿಸಲಿಲ್ಲ. ಹಾಗಿದ್ದರೆ ಸಾಮಾನ್ಯರ ಪಾಡೇನು ?

ಮಾತಾಪಿತರ ಈ ಮಹಾಲಯದಲ್ಲಿ ಬಹುಪಾಲು ಸಂಸಾರಗಳೆಲ್ಲವೂ ಪಾಚಿ ಕಟ್ಟಿದ ನೀರಿನಂತೆ; ಜೀವದ್ರವವೇ ಮರೆಯಾದಂತೆ ಗೋಚರಿಸುತ್ತವೆ. ನಿಧಾನವಾಗಿ ಪಾಚಿ ಸರಿಸಿ ನೀರನ್ನು ಎತ್ತಿದರೆ ಮಾತ್ರ ತಿಳಿನೀರು ಸಿಕ್ಕೀತು. ಅವಸರಿಸಿದರೆ ನೀರು ಬಗ್ಗಡವಾಗುವುದು ನಿಸ್ಸಂಶಯ. ಅವಸರದ ಬದುಕಿನಲ್ಲಿ ದಿನವೂ ಕದಡುವ ಅಂತಹ ಕಲುಷಿತ ನೀರನ್ನೇ ಸೇವಿಸುತ್ತ ಮನೋವಾಕ್ಕಾಯಗಳನ್ನು ಸದೃಢಗೊಳಿಸುವುದಾದರೂ ಹೇಗೆ? ಆದ್ದರಿಂದ ಪಾಚಿಯು ಕದಡದಂತೆ ಎಚ್ಚರದಿಂದ ಅದನ್ನು ಬದಿಗೆ ಸರಿಸಿ, ತಿಳಿನೀರನ್ನು ಸಂಗ್ರಹಿಸುವ ಶ್ರಮವು ಯಾವುದೇ ಸಂಸಾರದಲ್ಲಿ ಅನಿವಾರ್ಯ. ಬುದ್ಧಿ ಕಲಕಬಾರದು; ಕುಲುಕಬಾರದು; ತುಳುಕಲೂ ಬಾರದು. ಹದವಿಲ್ಲದ ವೇಗಕ್ಕೆ ಒಲಿಯದ ಮತ್ತು ಹದವರಿತ ಸಂಯಮಕ್ಕೆ ಒಲಿಯುವ ಸೂತ್ರವಿದು. ಆದ್ದರಿಂದಲೇ – ಪುಣ್ಯಫಲಭರಿತ ಶುಕವೃಕ್ಷಗಳು ಆಧುನಿಕ Smart Cityಗಳಲ್ಲಿ ಕಾಣುವಂತಹುದಲ್ಲ.

ಪ್ರಾರಬ್ಧದಿಂದ ಬಸವಳಿದು ಬಾಯಾರಿ, ಪುನರಪಿ ಜನ್ಮ ತಳೆದು ಭೂಮಿಗೆ ಆಗಮಿಸುವ ಚಿತ್ತುಚಿತ್ತಾದ ಜೀವವೃಕ್ಷದ ಬೀಜಗಳು, ನಿಗದಿತ ಅರವಟ್ಟಿಗೆಯಲ್ಲಿ ಬಂದು ಬಿದ್ದು ಅಲ್ಲೇ ಚಿಗುರಿದಾಗ, ಜೀವವೃಕ್ಷದ ಬೇರಿಗೆ ನೀರೂಡಿಸಿ ಬೇಲಿಯೊಳಗೆ ಸುರಕ್ಷಿತವಾಗಿ ಲಾಲಿಸಿ ಪಾಲಿಸುವವರು ಮಾತಾಪಿತರು. ಅವರು ಕಾಲ

ಕಾಲಕ್ಕೆ ಬೌದ್ಧಿಕ ಪುಷ್ಟಿಯನ್ನೂ ನೀಡಬಲ್ಲವರಾದರೆ ಜೀವಸಸಿಯು ಹೆಮ್ಮರವಾದೀತು. ಫಲಪುಷ್ಪಭರಿತವಾಗಿ ಹೊಸ ಪಥಿಕರಿಗೆ ನೆರಳನ್ನೂ ನೀಡೀತು. ಹೊಸ ಜನ್ಮ ಪಡೆದ ಪಥಿಕರಿಗೆ ಕೈಮರವಾಗಿ, ಪಥ ತಪ್ಪದಂತೆ ರಕ್ಷಣೆಯೂ ಸಿಕ್ಕೀತು.

ಸಂಸಾರದಲ್ಲಿ ಬಿದ್ದ ಉದ್ದೇಶವು ಜೀವಿಗಳಿಗೆ ಮರವೆಯಾಗದಂತೆ ಕಾಪಾಡಬಲ್ಲವರು – ಮಾತಾಪಿತರು. ತಮ್ಮ ನಡೆನುಡಿಯ ಮೂಲಕವೇ ದೇಹಜೀವಭಾವದ ಸ್ಥೂಲ ಕಲ್ಪನೆಯನ್ನು ತಮ್ಮ ಸಂತಾನದಲ್ಲಿ ಮೂಡಿಸಬೇಕಾದವರೂ ಹೆತ್ತವರೇ. ಆದರೆ ದುರ್ದೈವವೆಂದರೆ, ಇಂದಿನ ಎಷ್ಟೋ ಅರವಟ್ಟಿಗೆಗಳು ಬತ್ತಿ ಹೋಗಿವೆ. ಅಲ್ಲಿ ನೆಲವೇ ಕಿತ್ತು ಹೋಗಿದೆ. ಗೋಡೆಗಳು ಬಿರುಕು ಬಿಟ್ಟಿವೆ.. ತಿಂದುಣ್ಣುವ ಸ್ಪರ್ಧೆಯಲ್ಲದೆ ಅಂತಹ ಸಂಸಾರಗಳಲ್ಲಿ ಯಾವುದೇ ಪಥ ದರ್ಶನವಾಗುವುದಿಲ್ಲ ; ತಾವೇ ದಿಕ್ಕುಗೆಟ್ಟು ನಿಂತಿರುವ ನತದೃಷ್ಟ ಹೆತ್ತವರು, ಸಹಜೀವಿಗಳ ಭೌತಿಕ ಆವಶ್ಯಕತೆಗಳನ್ನಷ್ಟೇ ಯಾಂತ್ರಿಕವಾಗಿ ಅಷ್ಟಿಷ್ಟು ಪೂರೈಸುತ್ತಿರುತ್ತಾರೆ. ಇತ್ತ, ಬಾಯಾರಿ ಬಂದ ಹಲವು ಹುಟ್ಟುಗಳಿಗೆ ಆಯಾ ಸಂಚಿತ ಸಂಸ್ಕಾರದಿಂದಾಗಿ, ಉದ್ದೇಶಿತ ಗುರಿಯಾಗಲೀ ಸತ್ಪಥದ ಗೊಡವೆಯಾಗಲೀ ಸೊಗಸುವುದಿಲ್ಲ. ಇಂತಹ ವೈರುಧ್ಯ ಸಂಧಿಯ – ಮಾತಾಪಿತ ಮತ್ತು ಸಂತಾನಗಳ ಮಾಯಾಪರದೆಯನ್ನು ಹರಿಸಲು ನೆರವಿಗೆ ಬರುವುದೇ – ಸಚ್ಚಿಂತನೆ ಮತ್ತು ಸತ್ಸಂಗ.

**ಅರ್ಥಮನರ್ಥಂ ಭಾವಯ ನಿತ್ಯಂ ನಾಸ್ತಿ ತತಃ ಸುಖಲೇಶಃ ಸತ್ಯಮ್ ।**
**ಪುತ್ರಾದಪಿ ಧನಭಾಜಾಂ ಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ ॥**

*‘ಹಣವು ಎಂದೆಂದಿಗೂ ಅನರ್ಥವನ್ನುಂಟುಮಾಡುವುದು. ಹಣದಿಂದ ಸುಖವೆಂಬುದು ಇಲ್ಲವೇ ಇಲ್ಲ. ಇದು ನಿಜ. ಧನಿಕನಿಗೆ ಮಗನಿಂದಲೂ ಭಯವುಂಟು. ಇದು ಸರ್ವತ್ರ ಇರುವ ರೀತಿ ಎಂಬುದನ್ನು ತಿಳಿದುಕೋ..’* ಶ್ರೀಶಂಕರಾಚಾರ್ಯರ **ಮೋಹಮುದ್ಗರ** ಎಂಬ ಸ್ತೋತ್ರ ಸಾಹಿತ್ಯದ ಭಾಗವಿದು. ‘ಭಜ ಗೋವಿಂದಂ ಮೂಢಮತೇ’ ಎಂದು ಆರಂಭವಾಗುವ ಈ ಸ್ತೋತ್ರವು ಮೌಢ್ಯ ದಿಂದ ಆವೃತವಾದ ಜೀವಿಗಳಿಗೆ ಮಾರ್ಗದರ್ಶಕ ಕೈಪಿಡಿಯಂತಿದೆ. ಈ ಸ್ತೋತ್ರದಲ್ಲಿ – ಗುರುಗಳು, ಮಾತಾಪಿತರು ತಮ್ಮ ಸಂತಾನಕ್ಕೆ ತೋರಬೇಕಾದ ಮಾರ್ಗದರ್ಶನವಿದೆ. **ಬ್ರಹ್ಮ ಸತ್ಯ– ಜಗನ್ಮಿಥ್ಯಾ** ಎಂಬ ವಾಣಿಯ ಸೂಕ್ಷ್ಮ, ಅವಿದ್ಯೆ ಮುಂತಾದ ಭವಪಾಶಗಳಿಂದ ಮುಕ್ತವಾಗುವ ದಿಗ್ದರ್ಶನವಿದೆ. ಜನರ ಜೀವನವನ್ನು ಸುಖಸಂಪದ್ಭರಿತ – ಸದ್ಗುಣಪೂರಿತವಾಗಿಸಿಕೊಳ್ಳಬೇಕು ಎನ್ನುವ ಕಳಕಳಿಯೂ ಇದೆ.

ಇಂತಹ ಸ್ವಸ್ಥ ಸುಖಚಿಂತನೆಯನ್ನು ಊಡಿಸಬಲ್ಲ ಮಾತಾಪಿತರು ಮತ್ತು ಇಂತಹ ಸಚ್ಚಿಂತನೆಯ ಪ್ರಭಾವಕ್ಕೊಳಗಾಗುವ ಸಂತಾನಗಳು ಯಾವುದೇ ಸ್ವಸ್ಥ ಸಮಾಜದ ಶಾಶ್ವತ ಸಂಪತ್ತುಗಳಾಗುತ್ತವೆ. ಇಂದಿಗೂ ಈ ಸಂಪತ್ತು ಭಾರತದ ನೆಲದಲ್ಲಿದೆ.

ಬಾಲ ಸಂನ್ಯಾಸತ್ವ ಸ್ವೀಕರಿಸಿ, ಅನೇಕ ಮಹತ್ಕಾರ್ಯಗಳನ್ನು ಸಾಧಿಸಿ, ಕೇವಲ ೩೨ ವರ್ಷ ಬದುಕಿದ್ದರೂ ತಮ್ಮ ಅಲ್ಪ ಆಯುರ್ಮಾನದಲ್ಲಿ ಭಾರತದ ಉದ್ದಗಲಕ್ಕೂ ಸಂಚರಿಸಿ ಜನರು ತಮ್ಮನ್ನು ತಾವೇ ತಿದ್ದಿಕೊಳ್ಳುವಂತೆ, ತನ್ಮೂಲಕ ಸನ್ಮಾರ್ಗಾವಲಂಬಿಗಳಾಗುವಂತೆ ಜನರನ್ನು ಉದ್ದೀಪಿಸಿದವರು – ಆದಿ ಶಂಕರಾಚಾರ್ಯರು. ಸುಮಾರು ೧೨೫೦ ವರ್ಷಗಳ ಹಿಂದೆ – ಅಧ್ಯಾತ್ಮ ಪಥದ ಕಠಿಣ ಆಯ್ಕೆಯಾದ ಜ್ಞಾನ ಮಾರ್ಗದಲ್ಲಿ – ಯಶೋದುಂದುಭಿ ಮೊಳಗಿಸಿದ ಅದ್ವೈತಾಚಾರ್ಯರಿವರು. ಜಟಿಲ ವಿಷಯಗಳನ್ನೂ ಲಾಲಿತ್ಯಪೂರ್ಣವಾಗಿ, ಹೃತ್ಪೂರ್ವಕವಾಗಿ, ಮೃದುಮಧುರವಾದ ಮಾತುಗಳಲ್ಲಿ ತಿಳಿ ಹೇಳಿದ ಜ್ಞಾನನಿಧಿ ಇವರು. ಮನಸ್ಸು–ಬುದ್ಧಿಯ ಅಪಾರ ಸಾಧ್ಯತೆಗಳನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಿದ ಮಹಾಮಹಿಮರು – ಶ್ರೀ ಶಂಕರಾಚಾರ್ಯರು.

**ಗೇಯಂ ಗೀತಾ ನಾಮಸಹಸ್ರಂ ಧ್ಯೇಯಂ ಶ್ರೀಪತಿ ರೂಪಮಜಸ್ರಂ ।**
**ನೇಯಂ ಸಜ್ಜನ ಸಂಗೇ ಚಿತ್ತಂ ದೇಯಂ ದೀನಜನಾಯ ಚ ವಿತ್ತಮ್ ॥**

‘ಭಗವದ್ಗೀತೆಯನ್ನು ಶ್ರದ್ಧೆಯಿಂದ ಸ್ವಲ್ಪ ಮಾತ್ರವೇ ಓದಿದ್ದರೂ ಗಂಗೆಯ ಒಂದೆರಡು ಹನಿಯನ್ನಷ್ಟೇ ಪಾನ ಮಾಡಿದ್ದರೂ ಸಜ್ಜನ ಸಂಗ, ದಾನಧರ್ಮ, ಶ್ರೀ ಕೃಷ್ಣನ ಪೂಜೆಯನ್ನು ಒಮ್ಮೆಯಾದರೂ ಮಾಡಿದ್ದರೆ ಅಂತಹ ಮನುಷ್ಯರಿಗೆ ಯಮನ ಭಯ ಇರುವುದಿಲ್ಲ’ ಎಂಬ ಭರವಸೆಯನ್ನು ಸಂಸಾರಕ್ಕೆ ನೀಡಿ, ಕರ್ಮಮಾರ್ಗದ ಮೂಲಕವೇ ಅದರ ಮುಂದಿನ ಹೆಜ್ಜೆಯಾದ ಜ್ಞಾನಮಾರ್ಗದತ್ತ ಸಮಾಜವನ್ನು ಆಕರ್ಷಿಸಿದವರು ಶ್ರೀಶಂಕರರು. ಜ್ಞಾನದ ಬಲದಿಂದಲೇ ನಿರ್ಭಯನಾಗಿದ್ದು – ಬದುಕನ್ನು ಸವಿಯುವಂತೆ ಸಂತ ಸಂನ್ಯಾಸಿಯು ನೀಡಿದ್ದ ಈ ಭರವಸೆಯು ಸಮಸ್ತ ಪಥಿಕರನ್ನು ಮುಟ್ಟಬೇಕು. ಪ್ರತಿಯೊಂದು ಅರವಟ್ಟಿಗೆಯೂ ಮತದ ಸಂಕುಚಿತ ಸಂಕೋಲೆಯಿಂದ ಬಿಡಿಸಿಕೊಂಡು ಸತ್ಪಥ, ಸದ್ವಿಚಾರಗಳನ್ನು ಊಡಿಸುತ್ತ – ನಿರ್ಭಯ ಸಮಾಜದ ನಿರ್ಮಾಣದಲ್ಲಿ ಕೈಜೋಡಿಸಬೇಕು. ಅದಕ್ಕಾಗಿ ಸುಶಿಕ್ಷಣ, ಸುಸಂಸ್ಕಾರಗಳ ಮೂಲಪಾಠವು, ಮನೆ ಎಂಬ ಮೊದಲ ಪಾಠಶಾಲೆಯಲ್ಲಿಯೇ ಎಲ್ಲರಿಗೂ ದೊರಕುವಂತಾಗಬೇಕು.. ಸ್ವಪ್ರಯತ್ನದಿಂದಲಾದರೂ ಅಭಿರುಚಿಯನ್ನು ಸಂಸ್ಕರಿಸಿಕೊಳ್ಳಬೇಕು.

ಸಂಸ್ಕಾರವುಳ್ಳ ಗರ್ಭದಲ್ಲಿಯೇ ಉತ್ತಮ ಅಭಿರುಚಿಯ ಶಿಶು ಜನ್ಮ ತಾಳುತ್ತದೆ ಎಂಬ ಮಾತಿಗೆ – ಶಿವಗುರು ಮತ್ತು ಆರ್ಯಾಂಬೆಯರ ಪುತ್ರನಾದ ಶ್ರೀ ಶಂಕರಾಚಾರ್ಯರಂತೆಯೇ – ಕ್ಷುದಿರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣೀ ದೇವಿಯ ಕಿರಿಯ ಮಗನಾದ ಶ್ರೀ ರಾಮಕೃಷ್ಣರೂ ಉತ್ತಮ ದೃಷ್ಟಾಂತ. ಶ್ರೀ ರಾಮಕೃಷ್ಣರ ತಾಯಿ ಚಂದ್ರಮಣೀ ದೇವಿಯವರು ತಮ್ಮ ಬದುಕಿನ ಉತ್ತರಾರ್ಧದಲ್ಲಿ ಮಗನಾದ ರಾಮಕೃಷ್ಣರ ಜೊತೆಯಲ್ಲಿದ್ದರು. ದಕ್ಷಿಣೇಶ್ವರದ ನಹಬತ್‌ನ ಮೇಲಿನ ಅಂತಸ್ತಿನಲ್ಲಿ ಅವರು ವಾಸಿಸುತ್ತಿದ್ದರು. ಪ್ರತಿದಿನ ಪ್ರಾತಃಕಾಲ ಶ್ರೀರಾಮಕೃಷ್ಣರು ತಾಯಿಗೆ ನಮಸ್ಕರಿಸಿ, ತಾವೇ ಸ್ವತಃ ಆಕೆಯ ಸೇವೆಯನ್ನು ಮಾಡುತ್ತಿದ್ದರು. ಅಮ್ಮನ ಯೋಗಕ್ಷೇಮವನ್ನು ತಾವೇ ಗಮನಿಸುತ್ತಿದ್ದರು. ಅವರು – ತನ್ನ ಪತ್ನಿಗೋ ಶಿಷ್ಯರಿಗೋ ತಮ್ಮ ತಾಯಿಯ ಸೇವೆಯ ಭಾಗ್ಯವನ್ನು ದಾಟಿಸಿರಲಿಲ್ಲ. ಹೆತ್ತ ಅಮ್ಮನಲ್ಲೂ –

ಹೆಣ್ಣು, ಹೆಂಗಸು ಎಂಬ ಭೇದವನ್ನು ಗುರುತಿಸಿ ಸೇವಕರಿಂದಲೋ ಪತ್ನಿ ಅಥವ ಬಳಗದ ಸುಪರ್ದಿಗೋ ಆಕೆಯನ್ನು ಒಪ್ಪಿಸಿ – ಸ್ವಂತ ಸುಖಕ್ಕೆ ಯಾವುದೇ ಪ್ರಯೋಜನವಿಲ್ಲದ – ಸೇವೆಯೆಂಬ ಕಿರಿಕಿರಿಯಿಂದಲೂ ನುಣುಚಿಕೊಳ್ಳುವ ಆಧುನಿಕ ಹಣವಂತ ಪುತ್ರ ಪುತ್ರಿಯರಿಗೆ ಶ್ರೀರಾಮಕೃಷ್ಣರು ಮಾದರಿಯಾಗಬೇಕು. ಏಕೆಂದರೆ – ತಾಯಿಯು ಹೆಣ್ಣೂ ಅಲ್ಲ ; ಹೆಂಗಸೂ ಅಲ್ಲ. ಆಕೆ ತಾಯಿ... ತಂದೆಯು ಗಂಡೂ ಅಲ್ಲ ; ಗಂಡಸೂ ಅಲ್ಲ. ಆತ ತಂದೆ... ಧನೋಪಚಾರವು ಎಂದಿಗೂ ಸಂತಾನೋಪಚಾರವಾಗದು. ಮಾತಾಪಿತರು ವೃದ್ಧಾಪ್ಯದಿಂದ ಬಾಧೆ ಪಡುವ ಹಂತದಲ್ಲಂತೂ ಯಾವುದೇ ಸಂತಾನವು ಸ್ತ್ರೀ ಪುರುಷ ಎಂಬ ಕ್ಷುದ್ರ ಭೇದಗಳಲ್ಲಿ ಮುಳುಗಲೇ ಬಾರದು. ಪುರುಷ ಪ್ರತಿಷ್ಠೆಯಾಗಲೀ ಸ್ತ್ರೀಲಜ್ಜೆಯಾಗಲೀ ಮಾತಾಪಿತರ ಸೇವೆಗೆ ಅಡ್ಡಿಯಲ್ಲ. ಹೊಸ ಚಿಂತನೆಗಳಲ್ಲಿ ಸ್ಪಷ್ಟತೆ ಮೂಡಬೇಕಾಗಿದೆ. ಅಭೇದವನ್ನು ಸಾಕ್ಷಾತ್ಕರಿಸಿಕೊಳ್ಳಲು ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳುವುದೊಂದೇ ಮಾರ್ಗ.

ವೇದಾಂಗದ ಯಾವುದೇ ಕರ್ಮಾಚರಣೆಗೆ ಒಂದು ಗಾಂಭೀರ್ಯವಿರುತ್ತದೆ; ಇರಬೇಕು. ಪಡಪೋಶಿ ಆಚರಣೆಗಳಿಂದ – ಆಯಾ ದಿನ ಉಂಡ ಸುಖ, ಕೆಲವರಿಗೆ ಪ್ರವಾಸದ ಸುಖ ಸಿಗಬಹುದಲ್ಲದೆ ಉದಾತ್ತ ಉದ್ದೇಶವು ಸಾಧನೆಯಾಗದು. ಈ ಬದುಕಿನ ಮಹಾಲಯಕ್ಕೆ ಪ್ರೀತಿ, ಕರುಣೆ, ನಂಬಿಕೆ, ವಿಶ್ವಾಸ, ಶ್ರದ್ಧೆಗಳೇ ತಳಪಾಯ. ತಳ ಉರುಳಿಸಿದರೆ ಮನೆಯೂ ಉಳಿಯದು; ಭಾವವು ಕಮರಿಹೋದರೆ ಮನಸ್ಸಿನ ನೆಮ್ಮದಿಯೂ ಉಳಿಯದು. ಆದ್ದರಿಂದ ಮನಸ್ಸಿನ ಸ್ವಾಸ್ಥ್ಯವನ್ನು ರಕ್ಷಿಸಿಕೊಳ್ಳುವಂತಹ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಶ್ರೀಶಂಕರ, ಶ್ರೀರಾಮಕೃಷ್ಣರು ನಮಗಾಗಿ ಉಳಿಸಿಹೋದ ಉನ್ನತ ಚಿಂತನೆಗಳು ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಮನುಷ್ಯರನ್ನು ಆಧರಿಸಬಲ್ಲವು.

ಮರಣಾನಂತರ ನಿರ್ವಹಿಸುವ ಶ್ರಾದ್ಧಕರ್ಮಗಳು – ಮಾತಾಪಿತರು ಬದುಕಿರುವಾಗ ಅವರಿಗೆ ಸಲ್ಲಿಸುತ್ತಿದ್ದ ಹೃತ್ಪೂರ್ವಕವಾದ ಮಾನಸಿಕ ಮತ್ತು ದೈಹಿಕ ಬೆಂಬಲದ ಸಂದು ಕಡಿಯದ ಭಾವ ಕ್ರಿಯೆ; ಪಿತೃಗಳ ನಿರಂತರ ಸ್ಮರಣೆಯ ಪ್ರತೀಕ. ಶ್ರಾದ್ಧದ ಹೂರಣವೇ ಶ್ರದ್ಧೆ.

ತಮ್ಮ ಇಳಿ ವಯಸ್ಸಿನಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜೊತೆಯಲ್ಲಿ ದಕ್ಷಿಣೇಶ್ವರದಲ್ಲಿಯೇ ವಾಸವಾಗಿದ್ದ ಚಂದ್ರಮಣಿಯವರ ಸಾವು ಸಮೀಪಿಸುತ್ತಿದ್ದಾಗ ಅವರನ್ನು ಅಂತರ್ಜಲಿ ಸಂಸ್ಕಾರಕ್ಕಾಗಿ (ಸಾಯುತ್ತಿರುವ ವ್ಯಕ್ತಿಯ ಶರೀರದ ಕೆಳಭಾಗವನ್ನು ನೀರಿನಲ್ಲಿ ಮುಳುಗಿಸುವ ಸಂಸ್ಕಾರವಿದು; ಬಹುಶಃ – ಪಂಚಭೂತಗಳಲ್ಲಿ ಒಂದಾಗಲು ಮಾನಸಿಕವಾಗಿ ಸಿದ್ಧಗೊಳಿಸುವ ಪೂರ್ವ ತಾಲೀಮು! ಮರಣವನ್ನು ಬುದ್ಧಿಪೂರ್ವಕವಾಗಿ ಸ್ವೀಕರಿಸುವಂತಹ ವೀರವಿಧಿ !) ಸಮೀಪ ದಲ್ಲಿದ್ದ ಬಕುಲ್ ತಾಲಾ ಘಾಟ್‌ಗೆ ಕರೆದೊಯ್ಯಲಾಯಿತು. ತನ್ನ ತಾಯಿಯು ಶಾಶ್ವತವಾಗಿ ಪರಲೋಕ ಯಾತ್ರೆಗೆ ಹೊರಟಿದ್ದಾಳೆ ಎಂಬುದು ಅರ್ಥವಾಗಿದ್ದರೂ ಆ ಕ್ಷಣದಲ್ಲಿ , ಶ್ರೀರಾಮಕೃಷ್ಣರೂ ವಿಚಲಿತರಾಗಿದ್ದರು. ಮಮತೆಯ ಪಾಶವು ಜೀವವನ್ನು ಕಟ್ಟುವಾಗಲೂ ನೋವು; ಬಿಡಿಸಿಕೊಳ್ಳುವಾಗಲೂ ನೋವು ಕೊಡುತ್ತದೆ! ಅದನ್ನೇ ಕರುಳಿನ ಬಂಧ ಎನ್ನುವುದು! ಆದರೆ.. ಈ ಸಂಸಾರವನ್ನು ನಿಲ್ಲದಂತೆ ಓಡಿಸುತ್ತಿರುವುದೂ ಅದೇ ಬಂಧ; ಸಂಸಾರಗಳು ಮುಗ್ಗರಿಸುವುದೂ ಅದೇ ಮಮತೆ ಯಿಂದ !

ಅಂದು ಅಂತಿಮ ಯಾತ್ರೆಗೆ ಸಿದ್ಧಳಾಗಿದ್ದ ತಮ್ಮ ತಾಯಿಯ ಕಾಲು ಹಿಡಿದು ''ಅಮ್ಮಾ, ನನ್ನನ್ನು ನಿನ್ನ ಗರ್ಭದಲ್ಲಿ ಹೊತ್ತ ನೀನು ಯಾರು? ಇಲ್ಲಿಯವರೆಗೆ ನನ್ನನ್ನು ನೀನು ನೋಡಿಕೊಂಡೆ. ಇನ್ನೂ ಹಾಗೇ ನೋಡಿಕೋ..'' ಎಂದು ಮನಸಾರೆ ಅತ್ತುಬಿಟ್ಟಿದ್ದರಂತೆ – ಶ್ರೀ ರಾಮಕೃಷ್ಣರು. ಭಾವತರ್ಪಣ ! ಅದಕ್ಕಿಂತ ಶ್ರೇಷ್ಠ ತರ್ಪಣವುಂಟೆ? ಶ್ರೀರಾಮಕೃಷ್ಣರು ಅದಾಗಲೇ ಗಲಿತ ಕರ್ಮಾವಸ್ಥೆಯನ್ನು ತಲುಪಿದ್ದರು. ಅಂದರೆ, ಎಲ್ಲ ಕರ್ಮವನ್ನು ಮೀರಿದ ಅವಧೂತ ಸ್ಥಿತಿಯನ್ನು ತಲುಪಿದ್ದ ಕಾರಣ, ೧೮೭೬ರಲ್ಲಿ ಚಂದ್ರಮಣೀ ದೇವಿಯವರು ದೈವಾಧೀನರಾದಾಗ ತಮ್ಮ ತಾಯಿಗೆ ದೈಹಿಕವಾಗಿ ತರ್ಪಣ ನೀಡಲೂ ಅವರಿಗೆ ಅಸಾಧ್ಯವಾಯಿತು. ಅವರ ಬೊಗಸೆಯಲ್ಲಿ ನೀರೂ ನಿಲ್ಲುತ್ತಿರಲಿಲ್ಲವಂತೆ. (ಸಂಗ್ರಹಕ್ಕೆ ವಿಮುಖವಾದ ಭಾವಸ್ಥಿತಿ?) ತಮ್ಮ ಸುದೀರ್ಘ ತಾಂತ್ರಿಕ ಸಾಧನೆಗಳಿಂದಾಗಿ ಪರಮಹಂಸರು ಆಗ ದೈಹಿಕವಾಗಿ ಕೂಡ ದುರ್ಬಲರಾಗಿದ್ದರು. ಅನಂತರ ರಾಮಕೃಷ್ಣರ ಸೂಚನೆಯಂತೆಯೇ ಅವರ ಸೋದರಳಿಯ ರಾಮಲಾಲನು ಚಂದ್ರಮಣೀ ದೇವಿಯವರ ಅಂತ್ಯಕರ್ಮಗಳನ್ನು ನಿರ್ವಹಿಸಿದ್ದನು.

ಶ್ರೀ ರಾಮಕೃಷ್ಣರು ಹೇಳುತ್ತಿದ್ದರು : ಈ ಪ್ರಪಂಚದಲ್ಲಿ ತಂದೆ ತಾಯಿಗಳಿಬ್ಬರೂ ಮಹಾನ್ ಗುರುಗಳು. ಅವರು ಬದುಕಿರುವವರೆಗೆ ಅವರ ಸೇವೆಯನ್ನು ಮಾಡುವುದು ಮಕ್ಕಳ ಕರ್ತವ್ಯ ಮತ್ತು ಅವರ ಮರಣಾನಂತರ ಅವರವರ ಶಕ್ತ್ಯನುಸಾರ ಶ್ರಾದ್ಧ ಮಾಡಬೇಕು. ಶ್ರದ್ಧೆಯ ಪರಿಧಿಯಲ್ಲಿ ಬರುವ ಲೋಕ ಮರ್ಯಾದೆಯನ್ನು ಯಾರೂ ಉಲ್ಲಂಘಿಸಬಾರದು ಮತ್ತು ತಾಪತ್ರಯಗಳಲ್ಲಿ ಸಿಲುಕಿ, ನಿತ್ಯಸ್ಮರಣೆಯಿಂದ ವಂಚಿತರಾಗುವ ಸಾಂಸಾರಿಕರು ವರ್ಷಕ್ಕೊಮ್ಮೆಯಾದರೂ ಪಿತೃಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದನ್ನು ರಾಮಕೃಷ್ಣರು ಅನುಮೋದಿಸಿದ್ದರು. ಸ್ವತಃ ತಾವು ಆಚರಿಸಿ, ಬೋಧಿಸಿದ್ದರು.

ಮಾತೃಭಕ್ತರಾಗಿದ್ದ ಶ್ರೀಶಂಕರ ಮತ್ತು ಶ್ರೀರಾಮಕೃಷ್ಣರಲ್ಲಿ ಹಲವು ಸಾಮ್ಯತೆಗಳಿದ್ದರೂ ಪ್ರತ್ಯೇಕವೆನಿಸುವ ವೈಶಿಷ್ಟ್ಯಗಳೂ ಇದ್ದವು. ಶ್ರೀಶಂಕರರು ಜ್ಞಾನಿಗಳಿಗೆ ಅರ್ಥವಾಗುವಂತೆ ಅದ್ವೈತವನ್ನು ಸಾಕಾರಗೊಳಿಸಿಕೊಂಡಿದ್ದರೆ ಶ್ರೀ ಪರಮಹಂಸರು ಪಾಮರರಿಗೂ ತಿಳಿಯುವಂತೆ ಅದ್ವೈತವನ್ನು ಉಂಡು ಉಟ್ಟು ಉಸಿರಾಗಿಸಿಕೊಂಡು ಬದುಕಿದರು ! ಒಬ್ಬರು ಅಲ್ಪಾವಧಿಯ ಬದುಕಿನಲ್ಲೇ ಸಾಗರೋಪಮವಾಗಿ ಬೋಧಿಸಿ ಸನಾತನ ವೇದವನ್ನು ಬದುಕಿಸಿದರು; ಇನ್ನೊಬ್ಬರು ಉನ್ನತ ಚಿಂತನೆಗಳೆಲ್ಲವನ್ನೂ ಸ್ವತಃ ಬದುಕಿ ಬೋಧಿಸಿ ಜೀವಸಾಗರವನ್ನು ಬದುಕಿಸಿದರು ! ಶಂಕರರು ತಮ್ಮ

ಪಾಂಡಿತ್ಯದ ಜ್ಞಾನಖಡ್ಗದಿಂದ ಅನ್ಯ ಶಾಸ್ತ್ರೋಕ್ತಿಗಳನ್ನು ತುಂಡರಿಸುತ್ತ ತಮ್ಮ ಮತವನ್ನು ಪ್ರತಿಪಾದಿಸುತ್ತ ನಡೆದರೆ, ರಾಮಕೃಷ್ಣರು – ಲೋಕರೂಢಿಯನ್ನು ನಯವಾಗಿ ತಿದ್ದುತ್ತ ಒಯನಾಗಿ ಒಪ್ಪಿಸಿ ಮೆಚ್ಚಿಸಿದರು! ಶಂಕರರು ಜ್ಞಾನಮಾರ್ಗಾವಲಂಬಿಯಾದರೆ ಪರಮಹಂಸರು ಜ್ಞಾನ, ಕರ್ಮ, ಭಕ್ತಿಮಾರ್ಗಗಳೆಲ್ಲವನ್ನೂ ಅನುಮೋದಿಸಿದರು; ಎಷ್ಟು ಮತವೋ ಅಷ್ಟು ಪಥ ಎಂದರು. ಸರ್ವ ಮಾರ್ಗಗಳೊಂದೆ ನಿಲಯಕೆ ಹೋಗುವಂಥವು – ಎಂದು ಭರವಸೆ ನೀಡಿದರು; ಪಾತ್ರ – ಪಾತ್ರೆಯ ರುಚಿಭೇದ ಮತ್ತು ಸಾಮರ್ಥ್ಯವನ್ನು ಅರಿತು ತಕ್ಕಂತೆ ಉಪದೇಶಿಸಿದರು; ಮುಳುಗುವವರನ್ನು ಹಿಡಿದೆತ್ತಿದರು. ಮುಖ್ಯವಾಗಿ, ಶ್ರೀ ಶಂಕರ ಪ್ರಣೀತ ಅದ್ವೈತವು ಜನಸಾಮಾನ್ಯರನ್ನೂ ಮುಟ್ಟುವಂತೆ ಮಾಡಿದರು. ಪಂಡಿತರಿಂದ ಹಿಡಿದು ಪಾಮರರವರೆಗೆ ಎಲ್ಲರನ್ನೂ ಶ್ರೀರಾಮಕೃಷ್ಣರು ಸಮಾನವಾಗಿ ಪೋಷಿಸಿದರು. ಹೀಗಿದ್ದೂ – ಈ ಯುಗಕ್ಕೆ ಭಕ್ತಿಮಾರ್ಗವೇ ಸುಲಭ ಎಂದೂ ಪರಮಹಂಸರು ದಾರಿ ತೋರಿದರು. ಅದಕ್ಕೆ ಕಾರಣವನ್ನೂ ಕೊಟ್ಟರು. ಜ್ಞಾನದ ಪ್ರಖರತೆಯನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯು ಇಂದಿನ ಪಾಮರರಿಗಿಲ್ಲ. ಆದುದರಿಂದ ಸೇವಕ ಶರಣಾಗತ ಭಾವದ ಶುದ್ಧ ಭಕ್ತಿ – ವೈರಾಗ್ಯವು ಸಾಮಾನ್ಯರನ್ನೂ ಆಧರಿಸಬಲ್ಲದು ಎಂದು ಶ್ರೀರಾಮಕೃಷ್ಣರು ಸರಳತೆಯ ಹಾದಿ ತೋರಿದರು.

ಪರಮಹಂಸರು ರಾಖಾಲ (ಸ್ವಾಮಿ ಬ್ರಹ್ಮಾನಂದ), ಶರತ್ (ಸ್ವಾಮಿ ಶಾರದಾನಂದ), ತಾರಕ (ಸ್ವಾಮಿ ಶಿವಾನಂದ) ಮುಂತಾದ ತಮ್ಮ ಬೆರಳೆಣಿಕೆಯ ಅಂತರಂಗ ಶಿಷ್ಯರು ಮತ್ತು ಸ್ವಾಮಿ ವಿವೇಕಾನಂದ ಎಂದೇ ಜಗದ್ವಿಖ್ಯಾತರಾದ ನರೇಂದ್ರನಂತಹ ಜ್ಞಾನಖಡ್ಗಗಳನ್ನು ರೂಪಿಸಿದರೆ, ಶಂಕರರು – ಪದ್ಮಪಾದ, ಸುರೇಶ್ವರ, ಹಸ್ತಾಮಲಕ, ತೋಟಕರಂತಹ ಶಿಷ್ಯರನ್ನು ರೂಪಿಸಿದರು. ಶ್ರೀ ಶಂಕರಾಚಾರ್ಯರು ಭಾರತದ ನಾಲ್ದೆಸೆಗಳಲ್ಲಿ ನಾಲ್ಕು ಅದ್ವೈತ ಪೀಠಗಳನ್ನು ಸ್ಥಾಪಿಸಿದರೆ, ಶ್ರೀರಾಮಕೃಷ್ಣರ ಕಾಲಾನಂತರ ಅವರ ಶಿಷ್ಯವೃಂದವು ಸ್ವಾಮಿ ವಿವೇಕಾನಂದರ ಮಾರ್ಗದರ್ಶನದಲ್ಲಿ ವಿಶ್ವದಾದ್ಯಂತ ರಾಮಕೃಷ್ಣ ಮಠಗಳನ್ನು ಸ್ಥಾಪಿಸಿ ರಾಮಕೃಷ್ಣ ಚಿಂತನೆಗಳ ಪ್ರಸಾರದಲ್ಲಿ ತೊಡಗಿಕೊಂಡರು. ಇಬ್ಬರೂ ಯುಗಪುರುಷರು ಸುಮಾರು ೧೦೦೦ ವರ್ಷಗಳ ಅಂತರದಲ್ಲಿ ಆಗಿನ ಸಮಾಜವನ್ನು ಬಲವಾಗಿ ಪ್ರಭಾವಿಸಿದರು. ಶಂಕರರು ಜ್ಞಾನದ ಕಿಡಿಯ ರೂಪದಲ್ಲಿಯೇ ಅವತರಿಸಿ, ತಮ್ಮ ಮೂರನೇ ವಯಸ್ಸಿನಲ್ಲಿಯೇ ಅಕ್ಷರದ ಸಹವಾಸದಲ್ಲಿದ್ದು ೮ನೇ ವಯಸ್ಸಿನಲ್ಲಿಯೇ ವೇದವಿದರಾಗಿದ್ದರೆ, ರಾಮಕೃಷ್ಣರು ಪ್ರಾಥಮಿಕ ಕೆಲವು ತರಗತಿಗಳನ್ನು ಕಂಡದ್ದು ಬಿಟ್ಟರೆ ಗ್ರಂಥಪಂಥಗಳನ್ನು ಓದಿದವರೇ ಆಗಿರಲಿಲ್ಲ! ಲೋಕಾನುಭವ ಮತ್ತು ಸ್ವಂತ ಸಾಧನೆಯೇ ಪರಮಹಂಸರ ಬಂಡವಾಳ. ಹೀಗಿದ್ದೂ ವೇದೋಪನಿಷತ್ತು ದ್ವೈತಾದ್ವೈತಗಳನ್ನು ರಾಮಕೃಷ್ಣರು ಸರಳವಾಗಿ ಸಮರ್ಥವಾಗಿಯೇ ಬೋಧಿಸಿದ್ದರು. ... ಶ್ರೀಶಂಕರರು ಸಾಕ್ಷಾತ್ ಶಂಕರನ ಅವತಾರವೆನಿಸಿಕೊಂಡರೆ ಶ್ರೀರಾಮಕೃಷ್ಣರು ಅವತಾರವರಿಷ್ಠರೆನಿಸಿಕೊಂಡರು! ಒಬ್ಬರು ವೇದಗಳನ್ನು ವಚನವಾಗಿಸಿದರೆ ಇನ್ನೊಬ್ಬರ ವಚನಗಳೆಲ್ಲವೂ ವೇದವಾದವು! ಇದು ಹೇಗೆ ಸಾಧ್ಯ? ಹೇಗೆ ಸಾಧ್ಯ ? ಅನ್ನಿಸಿದರೂ – ಲೋಕದಲ್ಲಿ ನವನೀತದ ಕೊರತೆಯಾದಾಗಲೆಲ್ಲ ದೈವಾಂಶ ಸಂಭೂತ ಅಸಾಧ್ಯಗಳು ಎಂಬ ಅಘಟಿತ ಘಟನೆಗಳು ಸಂಭವಿಸುತ್ತವೆ, ಅಸಾಧ್ಯಗಳೂ ಸುಸಾಧ್ಯವಾಗುತ್ತವೆ ಎಂದುಕೊಂಡು – ಸುಮ್ಮನಿರಬಹುದು !

ಮಹಾನ್ ವ್ಯಕ್ತಿಗಳೆಲ್ಲರೂ ಮಾತೃಭಕ್ತರಾಗಿರುವುದು ಸೋಜಿಗವೇನಲ್ಲ. ಶ್ರೀ ಶಂಕರಾಚಾರ್ಯರೂ ತಮ್ಮ ತಾಯಿ ಆರ್ಯಾಂಬೆಯನ್ನು ಅನ್ಯಾದೃಶವಾಗಿ ಗೌರವಿಸಿದ – ತಾಯಿಯ ಮಮತೆಗೆ ಪ್ರತಿಸ್ಪಂದಿಸಿದ ಆದರ್ಶವು ನಮ್ಮ ಮುಂದಿದೆ. ತಾಯಿಯನ್ನು ಪೂರ್ತಿಯಾಗಿ ಒಪ್ಪಿಸಿಯೇ ಸಂನ್ಯಾಸ ಸ್ವೀಕರಿಸಿದ್ದ ಆಚಾರ್ಯರು ಆಕೆಯ ಮರಣವು ಸನ್ನಿಹಿತವಾದಾಗ ಅಂತಃಶಕ್ತಿಯಿಂದಲೇ ಅದನ್ನು ಅರಿತುಕೊಂಡರು. ಆಗ ತಮ್ಮ ಶಿಷ್ಯರೊಂದಿಗೆ ಶೃಂಗಗಿರಿಯಲ್ಲಿದ್ದ ಶಂಕರಾಚಾರ್ಯರು ತಾಯಿಯು ವ್ಯಾಧಿಪೀಡಿತಳಾಗಿರುವುದನ್ನು ಯೋಗಶಕ್ತಿಯಿಂದಲೇ ತಿಳಿದುಕೊಂಡು ತಕ್ಷಣ ತಾಯಿಯನ್ನು ನೋಡಲು ಧಾವಿಸುತ್ತಾರೆ. ಕಾಲಡಿಯಲ್ಲಿದ್ದ ಅಮ್ಮನ ದರ್ಶನ ಮಾಡುತ್ತಾರೆ.

''ಅಮ್ಮಾ, ನಾನು ಶಂಕರ – ಬಂದಿದ್ದೇನೆ. ನಿನಗಾಗಿ ಏನು ಮಾಡಲಿ? ಹೇಳಮ್ಮಾ...'' ಎಂದು ಮರಣಶಯ್ಯೆಯಲ್ಲಿದ್ದ ತಾಯಿಯನ್ನು ಸಂತೈಸುತ್ತಾರೆ. ಆ ತಾಯಿಯಾದರೋ ಎಂತಹ ಪುಣ್ಯಾತ್ಮಳು! ''ಈ ನನ್ನ ಅಂತ್ಯಕಾಲದಲ್ಲಿ ನೀನು ಕುಶಲನಾಗಿರುವುದನ್ನು ಕಾಣುವಂತಾಯಿತಲ್ಲ? ಅದೇ ನನ್ನ ಭಾಗ್ಯ ಮಗೂ. ಇನ್ನು ನನಗೇನು ಬೇಕು? ಮುಪ್ಪಿನಿಂದ ಜರ್ಜರಿತವಾಗಿರುವ ಈ ದೇಹವನ್ನು ಇನ್ನೂ ಧರಿಸಲು ನನಗೆ ಶಕ್ತಿಯಿಲ್ಲ. ನನ್ನ ಮಗನಾದ ನೀನು ಶಾಸ್ತ್ರವಿಹಿತವಾದ ಮಾರ್ಗದಲ್ಲಿ ಈ ದೇಹವನ್ನು ಸಂಸ್ಕರಿಸಿ ನಾನು ಪುಣ್ಯಲೋಕವನ್ನು ಸೇರುವಂತೆ ಮಾಡು'' ಎಂದು ಆರ್ಯಾಂಬೆಯು ಕ್ಷೀಣಧ್ವನಿಯಲ್ಲಿ ಹೇಳುತ್ತಾಳೆ. ಆಗ ಆಚಾರ್ಯರು ತಮ್ಮ ತಾಯಿಗೆ ಪರತತ್ತ್ವವನ್ನು ಉಪದೇಶಿಸಿದರು. ಆದರೆ ಆಚಾರ್ಯರ ನಿರ್ಗುಣ ಬ್ರಹ್ಮತತ್ತ್ವದಲ್ಲಿ ಆಕೆಯ ಮನಸ್ಸು ನಿಲ್ಲಲಿಲ್ಲ. ''ಮಗೂ, ಕುಲಗೋತ್ರವಿಲ್ಲದ ಈ ಅದ್ವಿತೀಯ ನಿರ್ಗುಣ ತತ್ತ್ವವು ನನ್ನ ಅರಿವಿಗೆ ಮೀರಿದುದು. ಆದ್ದರಿಂದ ಸಗುಣನಾದ ದೇವತೆಯ ಕುರಿತು ನನಗೆ ತಿಳಿಹೇಳು..'' ಎಂದು ಕೇಳಿಕೊಂಡಳು. ಆಗ ಆಚಾರ್ಯರು ಭುಜಂಗೋಪವೃತ್ತಗಳಿಂದ ಭಕ್ತಿಪೂರ್ವಕವಾಗಿ ಸ್ತುತಿಸಲು ಆ ದಯಾಮಯನಾದ ಶಿವನು ತ್ರಿಶೂಲ, ಧನುಸ್ಸುಗಳಿಂದ ಕೂಡಿದ ದೂತರನ್ನು ಕಳುಹಿಸಿ ಕೊಟ್ಟನು. ಆ ದೃಶ್ಯವನ್ನು ನೋಡಿ ಬೆದರಿದ ಆರ್ಯಾಂಬೆಯು ''ಇವರೊಂದಿಗೆ ನಾನು ಹೋಗಲಾರೆ..'' ಎಂದು ನಡುಗಿದಳು. ಆಗ ಆಚಾರ್ಯರು ಶಿವದೂತರನ್ನು ಹಿಂದಕ್ಕೆ ಕಳಿಸಿ ಮಹಾವಿಷ್ಣುವನ್ನು ಭಕ್ತಿಯಿಂದ ಸ್ತುತಿಸಿದರು. ಮಹಾವಿಷ್ಣುವು ಪ್ರಸನ್ನನಾಗಿ ಆಚಾರ್ಯರ ಪ್ರಾರ್ಥನೆಯಂತೆ ಆರ್ಯಾಂಬೆಯ ಹೃದಯದಲ್ಲಿ

ನೆಲೆಯೂರಿದನು. ಆರ್ಯಾಂಬೆಯು ನಿರ್ಭಯದಿಂದ ತನ್ನ ದೇಹವನ್ನು ತ್ಯಜಿಸಿದಳು.

ಅನಂತರ ತಾಯಿಯ ಅಂತ್ಯಕ್ರಿಯೆಯನ್ನೂ ಶಂಕರರೇ ನೆರವೇರಿಸಿದರು. ಸಂನ್ಯಾಸಿಯಾಗಿ ಸರ್ವಸಂಗ ಪರಿತ್ಯಾಗಿಯಾದವನಿಗೆ ಉತ್ತರಕ್ರಿಯೆ ಮಾಡುವ ಅಧಿಕಾರವಿಲ್ಲ ಎಂದು ಅಡ್ಡಿ ಮಾಡಿದ ಬಂಧುಗಳನ್ನು ತಿರಸ್ಕರಿಸಿದ ಶಂಕರರು ಏಕಾಂಗಿಯಾಗಿ, ತಾವೇ – ತಮ್ಮ ತಾಯಿಯ ಅಂತ್ಯಕ್ರಿಯೆಗಳನ್ನು ಶುದ್ಧಚಿತ್ತದಿಂದ ನೆರವೇರಿಸುತ್ತಾರೆ. ಯಾವುದೇ ಇತಿಹಾಸವು ವರ್ಷವುರುಳಿದಂತೆ ಪುರಾಣವಾದಾಗ, ಅದರಲ್ಲಿ ಅಲ್ಲಲ್ಲಿ ನಾಟಕೀಯತೆ–ಅತಿಶಯೋಕ್ತಿಯ ಸ್ಪರ್ಶವಾಗುವುದೂ ಸಹಜ. ಆದರೆ ಅಧ್ಯಾಯಿಗೆ ಯಾವುದೇ ಪೂರ್ವಾಗ್ರಹವಿಲ್ಲದಿದ್ದರೆ ಮೂಲ ಕತೆಯನ್ನು – ಕತೆಯ ಭಾವವನ್ನು ಗ್ರಹಿಸುವುದು ಸಾಧ್ಯವಾಗುತ್ತದೆ.

ಸಂನ್ಯಾಸಿಗಳು ಮಾತೃಸಂಸ್ಕಾರವನ್ನು ಮಾಡುವುದು ಅಶಾಸ್ತ್ರೀಯವಾದರೂ ಸಂನ್ಯಾಸಪೂರ್ವದ ೮ರ ಎಳೆಯ ಹರೆಯದಲ್ಲಿ ತಾಯಿಗೆ ಕೊಟ್ಟ ಮಾತಿನಂತೆ, ಶ್ರೀ ಶಂಕರರು ತಮ್ಮ ತಾಯಿಯ ಅಂತ್ಯಕಾಲದಲ್ಲಿ ಆಕೆಯ ಜೊತೆಗಿದ್ದು, ಮಾತೃಭಕ್ತಿಗಿಂತ ಶಾಸ್ತ್ರವು ಮೇಲಲ್ಲ ಎಂಬುದನ್ನು ನಿರೂಪಿಸಿದರು. ಜ್ಞಾನವು ಕೊಡುವ ಶಕ್ತಿ ಇದು; ಭಾವಪ್ರಪಂಚದಲ್ಲಿ ನಿಯಮಗಳನ್ನು ಪಳಗಿಸಿಕೊಳ್ಳುವ ಪರಾಪರ ವಿವೇಚನೆ, ವಿವೇಕ..! ಇದೇ ಜ್ಞಾನಿಯ ಸಂಪತ್ತು.

ಜೀವಾತ್ಮಕ್ಕೂ ಪರಮಾತ್ಮಕ್ಕೂ ಭೇದವಿಲ್ಲ – ಚಿದ್ವಸ್ತು ಚೈತನ್ಯವು ಒಂದೇ; ಮನುಷ್ಯನು ಸದಾ ವಿಹಿತವಾದುದನ್ನೇ ಆಚರಿಸುವುದರಿಂದಲೂ ನಿಷಿದ್ಧವಾದುದನ್ನು ತ್ಯಜಿಸುವುದರಿಂದಲೂ ತನಗೆ ಬೇಕಾದ ಪುರುಷಾರ್ಥವನ್ನು ಪಡೆಯುತ್ತಾನೆ..ಕರ್ಮಗಳಲ್ಲಿಯೇ ತೊಡಗಿಕೊಂಡಿರುವ ಕರ್ಮನಿಷ್ಠರಿಗೆ ದೇಹವೇ ಆತ್ಮವೆಂಬ ಬುದ್ಧಿಯು ಮೂಡುತ್ತದೆ; ಇದರಿಂದ ಉನ್ನತಿಗೆ ತೊಡಕಾಗುವುದು; ಪರಮಾತ್ಮನೇ ನಾನು ಎಂಬ ವಿವೇಚನೆಯಿಂದ – ಆತ್ಮಸ್ಥೈರ್ಯದಿಂದ ಧ್ಯಾನಿಸುವುದರಿಂದಲೇ ಮುಕ್ತಿ... ಎಂಬುದನ್ನು ಶಂಕರಾಚಾರ್ಯರೂ ರಾಮಕೃಷ್ಣರೂ ಬದುಕಿ ತೋರಿದರು. ಆದ್ದರಿಂದಲೇ ಇವರ ವಚನಗಳು ಆದೇಶಗಳಾದವು; ಮಹಾವಾಕ್ಯಗಳಾದವು; ಆಧುನಿಕ ಶ್ರುತಿ ಸ್ಮೃತಿಗಳಾದವು! ಇಂತಹ ಮಹಾತ್ಮರ ನಡೆನುಡಿಗಳು ಸಾಂಸಾರಿಕರಿಗೂ ಪ್ರೇರಣೆ ನೀಡಬಲ್ಲವು.

ಮಾತಾಪಿತರು ಬದುಕಿರುವಾಗ ಅವರ ಸೇವೆ ಮತ್ತು ಸತ್ತನಂತರ ಅವರ ಶ್ರಾದ್ಧ – ಇವೆರಡೂ ಶ್ರದ್ಧೆ ಮತ್ತು ಕೃತಜ್ಞತೆಯ ಕರ್ಮಗಳು. ಇವು ಮನುಷ್ಯಮಾತ್ರರ ಕರ್ತವ್ಯಗಳು. ಮಹಾಪುರುಷರನ್ನು ಅಧ್ಯಯನ ಮಾಡಿದರೆ ಅವರ ಬದುಕಿನ ಉತ್ತಮ ವಿಷಯಗಳು ಪ್ರೇರಣೆ ನೀಡುತ್ತವೆ. ಪ್ರಪಂಚದ ಯಾವ ಜ್ಞಾನಿಯೂ ಪ್ರಾಪಂಚಿಕ ಕರ್ತವ್ಯದಿಂದ ವಿಮುಖವಾಗಿಲ್ಲ, ಕರ್ತವ್ಯವೆಂದರೆ ತಲೆತಗ್ಗಿಸಿ ಆಚರಿಸುವ ಕೃತಜ್ಞತೆ. ಗಮ್ಯವನ್ನು ತಲುಪಿಸಲಾಗದ – ನಡುಹಾದಿಯವರೆಗೆ ಮಾತ್ರ ತಲುಪಿಸಬಲ್ಲ ಕರ್ಮ ಕರ್ಮಾತಹಾದಿಗಿಂತ ಜೀವಭಾವದ ಕರ್ತವ್ಯ ಸ್ಪಂದನೆಯೇ ಶ್ರೇಷ್ಠ; ಪೂರ್ಣತೆಯತ್ತ ಕರೆದೊಯ್ಯುವ ಜ್ಞಾನಮಾರ್ಗವು ಪರಮ ಶ್ರೇಷ್ಠ.

ಆದರೆ ವಿಕಾಸದ (!) ಹಾದಿಯಲ್ಲಿ ದಾಪುಗಾಲಿಡುತ್ತಿರುವ ಈ ಉದ್ಧಟ ಹಕ್ಕಿನ ಯುಗದಲ್ಲಿ – ಕರ್ತವ್ಯ ಎಂಬ ಮಾತೇ ಬೆಲೆ ಕಳೆದುಕೊಳ್ಳುತ್ತಿರುವ ನಾಣ್ಯವಾಗುತ್ತಿದೆ. ಜ್ಞಾನದ ವ್ಯಾಖ್ಯೆಯು ಸೀಮಿತಗೊಂಡಿದೆ. ಹೆತ್ತವರು ಬದುಕಿರುವಾಗ – ತೋರಿಕೆಯ ಸೇವೆಯ ಪ್ರದರ್ಶನ, ಫೋಟೋಗ್ರಾಫರ್‌ನ ಸಮ್ಮುಖದಲ್ಲಿ ಅಮ್ಮನಿಗೆ ನಮಸ್ಕರಿಸುವ ಕೋಲಾಹಲ, ಸೆಲ್ಫೀಗಳು, ಸತ್ತನಂತರ ವಿದ್ಯುತ್ ಚಿತೆಯಲ್ಲಿ ವಿಲೇವಾರಿ, ಅದ್ದೂರಿಯ ಶ್ರಾದ್ಧಗಳು ನಡೆ ಯುತ್ತಲೇ ಇವೆ! ಅದ್ದೂರಿಯೇ ಮುಂದೆ ಮುಂದೆ; ಭಾವ? ನಾಸ್ತಿ! ಯಾವುದೇ ಅದ್ದೂರಿತನವು ಏಕಾಗ್ರತೆಯನ್ನು ಉಳಿಸಗೊಡುವುದಿಲ್ಲ; ಏಕಾಗ್ರಚಿತ್ತದಿಂದ ನಡೆಸದ ಯಾವುದೇ ಕರ್ಮಗಳಿಗೆ ಫಲವಿಲ್ಲ. ನಮ್ಮನ್ನು ಬಹಿರ್ಮುಖಗೊಳಿಸುವ ಯಾವುದೇ ನಿಷ್ಫಲ ಕರ್ಮಗಳು – ಸದ್ಭಾವಗಳ ವಿಡಂಬನೆಯಷ್ಟೇ ಆಗಬಲ್ಲದು. ಮಾತಾಪಿತರಲ್ಲಿ ತೋರುವ ಯಾವುದೇ ವರ್ತನೆಯು ಶುದ್ಧ ಭಾವದ ಪ್ರತೀಕವಾಗಿರುವುದು ಅತಿ ಅಗತ್ಯ. ಭಾವಭಕ್ತಿಯಿಲ್ಲದ ಕರ್ಮಗಳೆಲ್ಲವೂ ವ್ಯರ್ಥವೇ. ಮಾತಾಪಿತರ ಸೇವೆಯು ಯಾರನ್ನೋ ಮೆಚ್ಚಿಸುವ ಕೆಲಸವಲ್ಲ. ನಮ್ಮ ಸ್ವಾತ್ಮಕ್ಕೆ ವಿಧೇಯವಾಗುವ ಕರ್ಮ. ನಮ್ಮ ಯಾವುದೇ ಕರ್ಮಗಳು ಬಂಧನ ಆಗಬಾರದು; ಬಿಡುಗಡೆಯ ಹಾದಿಯನ್ನು ತೋರಬೇಕು. ಭಯ ಬಂಧನ ಶೋಕಿ ತೋರಿಕೆಗಳ ನಡುವೆ ಯಾವುದೇ ಕರ್ಮಾಚರಣೆಯು ನರಳುವಂತಾಗಬಾರದು. ಭಕ್ತಿ ಶ್ರದ್ಧೆಯಿಲ್ಲದ – ತಂತ್ರ, ಮಂತ್ರಗಳು ವ್ಯರ್ಥ. ನಮ್ಮ ಪಿತೃಗಳು ಭಕ್ತಿ–ಭಾವದಿಂದಲೇ ಕಟ್ಟಿದ ಈ ಲೋಕದಲ್ಲಿ ಸದ್ಭಾವಗಳು ಎಂದಿಗೂ ಬತ್ತಬಾರದು. ನಮ್ಮ ಯಾವುದೇ ಕರ್ಮದಿಂದ ಅಜ್ಞಾನದ ಪರಿಧಿಯು ವಿಸ್ತರಿಸುವಂತಾಗಬಾರದು.

ಪಿತೃಗಳು ಎಂದಿಗೂ ಪರರಲ್ಲ ; ಶ್ರದ್ಧೆಯು ಯಾವತ್ತೂ ಅಪರವೂ ಅಲ್ಲ. ನಮ್ಮೊಳಗೇ ಇರುವವರನ್ನು ವೈದಿಕ ಕರ್ಮಾಂಗದ – ವಾರ ತಿಥಿ ಮಾಸ ಕುತಪ ಕಾಲದ ಹೊರತಾಗಿಯೂ ನೋಡಬಲ್ಲೆವಾದರೆ – ವರ್ಷಕ್ಕೊಮ್ಮೆ ನಡೆಸುವ ಶ್ರಾದ್ಧ, ತರ್ಪಣದ ಕ್ರಿಯೆಯು ಹೆಚ್ಚು ಅರ್ಥಪೂರ್ಣವಾದೀತು. ಅರ್ಥವಾಗದೆ ನಡೆಸುವ ಯಾವುದೇ ಅರ್ಥವಿಲ್ಲದ ಕರ್ಮಗಳು ವ್ಯರ್ಥ. ವೇದೋಕ್ತ ಮಂತ್ರಗಳನ್ನು ಅರ್ಥೈಸಿಕೊಂಡಾಗ ಸಮಗ್ರ ಕರ್ಮಾಂಗವು ಭಾವ ಪ್ರಧಾನವಾದುದು ಎಂಬ ಅನುಭವವೂ ಆಗುತ್ತದೆ.

ಇಂತಹ ಭಾವಬದುಕಿನಲ್ಲಿ – ಆಕಾಶರೂಪೀ ತಂದೆ, ಭೂಮಿ ರೂಪೀ ತಾಯಿಯನ್ನು ಸ್ಮರಿಸಿಕೊಳ್ಳಲು ಅಮಾವಾಸ್ಯೆ ಹುಣ್ಣಿಮೆಗಳನ್ನು ಕಾಯಬೇಕೆ ? ಜೀವಿಗಳ ಬದುಕಿನ ಯಾತ್ರೆಯ ಸರಪಣಿ ಓಟದಲ್ಲಿ ತಾವೂ ಭಾಗವಾಗಿ, ಸಂತಾನಗಳೂ ಭಾಗವಹಿಸುವಂತೆ ಮಾಡಿದ ಪಿತೃಗಳು – ಈ ಸೃಷ್ಟಿಯ ಚಾಲಕರು. ಬದುಕಿ ಬದುಕಿಸುವವರು. ನಿಸ್ಸಂದೇಹವಾಗಿ – ಪ್ರಾತಃಸ್ಮರಣೀಯರು; ನಿತ್ಯವಂದ್ಯರು.